**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 6/2020 ಪಿ.ಡಬ್ಲ್ಯೂಃ 12

ಸಿ.ಡಬ್ಲ್ಯೂಃ 31

| | |
|---|---|
| ಸಾಕ್ಷಿದಾರರ ಹೆಸರು | ಮೊಹಮದ್ ರಿಯಾಜ್ |
| ತಂದೆಯ ಹೆಸರು | ಮೈದೀನ್ |
| ವಯಸ್ಸು | 38 ವರ್ಷ |
| ಉದ್ಯೋಗ | ಗುಜುರಿ ವ್ಯಾಪಾರ |
| ವಿಳಾಸ | ಕಟಪಾಡಿ |

ದಿನಾಂಕಃ 08-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ಚಾಸಾ-1 ಗೊತ್ತು, ಅವರು ಕಟಪಾಡಿಯ ಕಲ್ಲಾಪು ಎಂಬಲ್ಲಿ ಗುಜುರಿ ಅಂಗಡಿ ನಡೆಸುತ್ತಿದ್ದರು. ನಾನು ಅವರ ಬಳಿ ಕೆಲಸ ಮಾಡಿಕೊಂಡಿದ್ದೆ. ಅವರ ಬಳಿ ಕೆಎ-19-8184 ರ ಪಿಕಪ್ ವಾಹನ ಇತ್ತು. ಅದನ್ನು ಸಾಮಾನ್ಯವಾಗಿ ರಾತ್ರಿ ಅಂಗಡಿಯಿಂದ ಹೊರಗೆ ನಿಲ್ಲಿಸಿ ಮನೆಗೆ ಹೋಗುತ್ತಿದ್ದರು. 7 – 8 ವರ್ಷಗಳ ಹಿಂದೆ ಒಂದು ದಿನ ರಾತ್ರಿ ವಾಹನವನ್ನು ನಿಲ್ಲಿಸಿ ಹೋದಾಗ ಅದು ಕಳ್ಳತನವಾಗಿತ್ತು. ಅದು ಮಾರನೇ ದಿನ ತಿಳಿದಿತ್ತು. ಈ ವಿಷಯವಾಗಿ ಮಾರನೇ ದಿನ ಬೆಳಿಗ್ಗೆ ಚಾಸಾ-1 ನನಗೆ ಹೇಳಿದಾಗ ತಿಳಿದಿತ್ತು. ಅದಕ್ಕಾಗಿ ದೂರು ಸಹ ಕೊಟ್ಟಿದ್ದರು. ಪೊಲೀಸರು ಅಲ್ಲಿಗೆ 2 – 3 ದಿನಗಳ ನಂತರ ಬಂದಿದ್ದರು. ಅಲ್ಲಿ ಕಳ್ಳತನವಾಗಿದ್ದ ಬಗ್ಗೆ ವಿಚಾರಿಸಿದ್ದರು, ಆಗ ನಾನು ಸಹ ಅವರಿಗೆ ಹೇಳಿದ್ದೆ. ಪೊಲೀಸರು ಅಲ್ಲಿ ನನ್ನ ಸಹಿ ಪಡೆದಿಲ್ಲ. ಪೊಲೀಸರು ಕಳ್ಳತನವಾದ ಮಾರನೇ ದಿನ ಅಲ್ಲಿಗೆ ಬಂದಿದ್ದರು. ಆಗ ಚಾಸಾ-1 ಅಲ್ಲಿ ಜಾಗ ತೋರಿಸಿದ್ದರು. ಆಗ ಚಾಸಾ-1 ಇವರ ಸ್ನೇಹಿತ ಬಶೀರ್ ಸಹ ಇದ್ದರು. ಆ ಸಮಯದಲ್ಲಿ ಪೋಟೋವನ್ನುತೆಗೆದಿದ್ದರು.ನನಗೆ ಈಗ ತೋರಿಸಿದ ನಿಶಾನೆ ಪಿ-8 ರ ಪೋಟೋವನ್ನು

ನೋಡಿ ಗುರುತಿಸಿದ್ದೇನೆ. ಆ ಸಮಯದಲ್ಲಿ ಅಲ್ಲಿ ಯಾವುದೇ ದಾಖಲೆ ಮಾಡಿದ್ದು ನೆನಪಿಲ್ಲ.

2) ನನಗೆ ಈಗ ತೋರಿಸಿದ ನಿಪಿ-7 ರಲ್ಲಿಯ ಸಹಿಯನ್ನು ಠಾಣೆಯಲ್ಲಿ ಮಾಡಿದ್ದೆ. ನಿಪಿ-7 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನಗೆ ಆರೋಪಿತರ ಬಗ್ಗೆ ಮಾಹಿತಿ ಇಲ್ಲ. ಪೊಲೀಸರು ಅವರನ್ನು ಕಟಪಾಡಿಗೆ ಕರೆತಂದಿದ್ದ ಬಗ್ಗೆ ಗೊತ್ತಿಲ್ಲ. ಪಿರ್ಯಾಧಿದಾರರ ವಾಹನ ಸಿಕ್ಕಿದ್ದ ಬಗ್ಗೆ ನನಗೆ ನಂತರ ತಿಳಿದಿತ್ತು. ಅದನ್ನು ಪೊಲೀಸರು ಎಲ್ಲಿ, ಯಾರಿಂದ, ಯಾವಾಗ ಜಪ್ತು ಮಾಡಿದ್ದರು ಎಂದು ಗೊತ್ತಿಲ್ಲ. ನನಗೆ ಈಗ ತೋರಿಸಿದ ಎರಡು ಪಂಚನಾಮೆಗಳಲ್ಲಿರುವ ಸಹಿ ನನ್ನದೇ ಇದೆ. ಸದರಿ ಪಂಚನಾಮೆಗಳನ್ನು **ನಿಶಾನೆ ಪಿ-16 ಮತ್ತು 17** ಎಂದು ಗುರುತಿಸಿದೆ. ಅದರಲ್ಲಿರುವ ಸಹಿಗಳನ್ನು ನಿಶಾನೆ ಪಿ-16(ಎ) ಮತ್ತು 17(ಎ) ಎಂದು ಗುರುತಿಸಿದೆ. ಆ ಸಹಿಗಳನ್ನು ಸಹ ಠಾಣೆಯಲ್ಲಿಯೇ ಮಾಡಿದ್ದೆ. ನಿಪಿ-16 ಮತ್ತು 17 ರಲ್ಲಿ ಇರುವ ವಿಷಯ ಗೊತ್ತಿಲ್ಲ. ಪೊಲೀಸರು ನನ್ನನ್ನು ಬೇರೆ ವಿಚಾರಿಸಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ**

1) ತಾರೀಕು 22-06-2019 ರಂದು ಕಾಪು ಪೊಲೀಸರು ಬೆಳಗ್ಗಿನ 11 ರಿಂದ 12.00 ಗಂಟೆಯ ಸಮಯದಲ್ಲಿ ಚಾಸಾ-1 ಇವರ ಅಂಗಡಿಯ ಬಳಿ ಬಂದು, ನನ್ನ ಮತ್ತು ಚಾಸಾ-32 ಇವರ ಸಮಕ್ಷಮ, ನಿಪಿ-7 ರ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. ಆ ಪಂಚನಾಮೆಯನ್ನು ಠಾಣೆಯಲ್ಲಿ ಮಾಡಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2) ಪೊಲೀಸರು ತಾರೀಕು 20-07-2019 ರಂದು ಬೆಳಿಗ್ಗೆ 4.30 ಗಂಟೆಗೆ ನಾನು ಕಟಪಾಡಿ ಜಂಕ್ಷನ್ ಕಡೆಗೆ ಹೋಗುತ್ತಿದ್ದಾಗ, ಕಾಪು ಪೊಲೀಸರು ನನ್ನನ್ನು ಮತ್ತು ಚಾಸಾ-33 ಇವರನ್ನು ಪಂಚರಾಗಿ ಸಹಕರಿಸಲು ಕೋರಿದ್ದರು ಎಂದರೆ ಸರಿಯಲ್ಲ. ಆಗ ಪೊಲೀಸರ ಬಳಿಯಲ್ಲಿ ಒಂದು ಇಂಡಿಕಾ ಕಾರು ನಂಬ್ರ ಕೆಎ-20-ಎಬಿ-8799 ನೇ

ಕಾರನ್ನು ಮತ್ತು ಅದರಲ್ಲಿ ಇದ್ದ 1 ರಿಂದ 4 ನೇ ಆರೋಪಿತರನ್ನು ವಿಚಾರಣೆಗಾಗಿ ಅಲ್ಲಿ ನಿಲ್ಲಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಪೊಲೀಸರ ವಿಚಾರಣೆಯಿಂದ ಆ ಕಾರಿನಲ್ಲಿದ್ದವರು, ಕಾರುಗಳ ಕಳ್ಳತನಕ್ಕಾಗಿ ಕಾಪುವಿನ ಕಡೆಗೆ ಹೋಗುತ್ತಿದ್ದಾರೆಂದು ಪೊಲೀಸರಿಗೆ ತಿಳಿದಿತ್ತು ಎಂದರೆ ಸರಿಯಲ್ಲ. ಆದಿನ ನಿಲ್ಲಿಸಿದ್ದ ಆರೋಪಿತರೇ ಚಾಸಾ-1 ಈತನ ಪಿಕಪ್ ವಾಹನವನ್ನು ಕದ್ದಿದ್ದರು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆಗ ನಮ್ಮ ಸಮಕ್ಷಮ ಪೊಲೀಸರು ಆರೋಪಿತರನ್ನು ವಿಚಾರಣೆಗೆ ಪಡೆದುಕೊಂಡು, ಅವರ ವಶದಲ್ಲಿದ್ದ ಒಂದು ಕಾರು, ಕಾರಿನ ಒಳಗೆ ಇದ್ದ ನಂಬ್ರ ಪ್ಲೇಟ್, ಮತ್ತು 34 ಕೀಲಿಗಳ ಒಂದು ಬಂಚ್ ನ್ನು ವಶಪಡಿಸಿಕೊಂಡು, ಅದಕ್ಕಾಗಿ ಅಲ್ಲಿಯೇ ನಿ.ಪಿ-16 ರ ಪಂಚನಾಮೆಯನ್ನು ಬರೆದುಕೊಂಡು, ಓದಿ ಹೇಳಿ ,ನಮ್ಮ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ.

2) ಆದಿನ ಕಾರಿನಲ್ಲಿದ್ದ 3 ನೇ ಆರೋಪಿ, ಆತನ ಹೇಳಿಕೆಯಲ್ಲಿ ಪಿರ್ಯಾಧಿಯ ವಾಹನದ ಬಗ್ಗೆ ಮಾಹಿತಿ ನೀಡಿದ್ದರು ಎಂದರೆ ಸರಿಯಲ್ಲ. ಅದಕ್ಕಾಗಿ ಪೊಲೀಸರು ಸದರಿ ಆರೋಪಿಯೊಂದಿಗೆ ನಮ್ಮನ್ನು ಸಹ ಕರೆದುಕೊಂಡು ಎನ್ .ಆರ್. ಪುರದ ಆತನ ಮನೆಯ ಬಳಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಅಲ್ಲಿ ನಿಂತಿದ್ದ ಪಿಕಪ್ ವಾಹನವನ್ನು 3 ನೇ ಆರೋಪಿ ತೋರಿಸಿ, ಹೇಳಿದ್ದರ ಮೇರೆಗೆ ಪೊಲೀಸರು ನನ್ನ ಮತ್ತು ಚಾಸಾ-33 ಇವರ ಸಮಕ್ಷಮ ಬೆಳಗ್ಗಿನ 11.00 ರಿಂದ 12.00 ಗಂಟೆಯ ಸಮಯದಲ್ಲಿ ನಿಪಿ-17 ರ ಪಂಚನಾಮೆಯನ್ನು ಬರೆದಿದ್ದರು ಎಂದರೆ ಸರಿಯಲ್ಲ.

3) ತಾರೀಕು 22-06-2019 ಮತ್ತು ತಾರೀಕು 20-07-2019 ರ ಪಂಚನಾಮೆಗಳಿಗಾಗಿ ತಾರೀಕು 31-07-2019 ರಂದು ಈಗ ಓದಿದ ಎರಡು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ**ಶಾನೆ ಪಿ-18 ಮತ್ತು 19** ಎಂದು ಗುರುತಿಸಿದೆ. ಆದಿನ ನಾನು ಚಾಸಾ-1 ಮತ್ತು ಆರೋಪಿತರು ಹೇಳಿದ ಮತ್ತು ಆರೋಪಿತರು ತೋರಿಸಿದ ಜಾಗೆಗಳಲ್ಲಿ ಬರೆದ ಪಂಚನಾಮೆಗಳಿಗೆ ಸಹಿ ಮಾಡಿದ್ದರೂ, ಈಗ ಆರೋಪಿತರಿಗೆ ಸಹಾಯವಾಗಲೀ ಎಂದು ಠಾಣೆಯಲ್ಲಿ ಸಹಿ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ ಎ.ಬಿ.ಹೆಚ್. ವಕೀಲರಿಂದ 3 ಮತ್ತು 4 ನೇ ಆರೋಪಿತರ ಪರವಾಗಿ ಇಲ್ಲ ಎಂದು ಸಲ್ಲಿಸಿದ್ದಾರೆ**

**ಮರು ವಿಚಾರಣೆ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ